# CMRITNSS TOOK INITIATIVE TO BEAUTIFY GOVT SCHOOLS

**Publication: Nadasahayadri**
**Date:01-05-2022**

# ಚಿತ್ರಕಲೆ ಮನುಷ್ಯನನಲ್ಲಿ ಭಾವೈಕ್ಯತೆ ಮೂಡಿಸುತ್ತದೆ



ಅರಸೀಕೆರೆ ಚಿತ್ರಕಲೆ ಎಂಬುದು ಕಲೆಗಾರನಿಗೆ ಮನಶ್ಯಾಂತಿ ಸಮಾಜಕ್ಕೆ ಸಂದೇಶ ಹಾಗೂ ಭಾವೈಕ್ಯತೆಯನ್ನು ಮೂಡಿಸುತ್ತದೆ ಎಂದು ಹಾಸನ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನ ಎನ್ನೆಸ್ಸೆಸ್ ಅಧಿಕಾರಿ ವಿಜಯಕುಮಾರ ಅಭಿಪ್ರಾಯಪಟ್ಟರು ಅವರು ಇಲ್ಲಿಗೆ ಸಮೀಪದ ಹಾರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಮ್ಮ ಕಾಲೇಜು ಹಾಗೂ ಬೆಂಗಳೂರಿನ ಚಿಕ್ಕಮುನಿಯಪ್ಪ ರೆಡ್ಡಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಶಾಲಾ ಪ್ರಗತಿ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಪೂರಕವಾದ ಚಿತ್ರಗಳನ್ನು ಸುಂದರವಾಗಿ ಗೋಡೆಗಳಮೇಲೆ ಬರೆಯುವ ಮೂಲಕ ಎಲ್ಲಾ ವಿದ್ಯಾರ್ಥಿಗಳು ತಮ್ಮ ಸೇವಾ ಮನೋಭಾವ ಹಾಗೂ ಕಿರಿಯ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ತಮ್ಮ ಕುಂಚದ ಮೂಲಕ ಶುಭಕೋರಿದ್ದಾರೆ ಎಂದ ಅವರು ಶಾಲಾ ಶಿಕ್ಷಕ ವರ್ಗ ಹಾಗೂ ಇಲ್ಲಿನ ಕೆಲ ಹಳೆವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಸಹಕರಿಸಿದ್ದಾರೆ ಎಲ್ಲರಿಗೂ ನಾವು ಆಭಾರಿಯಾಗಿದ್ದೇವೆ ಈ ಗ್ರಾಮದಲ್ಲಿ ಸ್ವಾತಂತ್ರ ಹೋರಾಟಗಾರರನ್ನು ಹೊಂದಿದ್ದು ಅವರ ದೇಶಸೇವೆ ಚಿರಸರಣೀಯ ಎಂದರು ಬೆಂಗಳೂರಿನ ಚಿಕ್ಕ ಮುನಿಯಪ್ಪ ರೆಡ್ಡಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಕ್ರೀಡಾ ನಿರ್ದೇಶಕ ಶೋಭ ವಿದ್ಯಾರ್ಥಿಗಳು ಉತಾಹದಿಂದ ಪಾಲ್ಗೊಂಡಿದ್ದರು ಕಲಾಚಿತ್ರಗಳು ಉತ್ತಮವಾಗಿ ಮೂಡಿ ಬಂದಿದೆ ಎಲ್ಲಾ ವಿದ್ಯಾರ್ಥಿಗಳು ಶಿಸ್ತುಬದ್ಧವಾಗಿ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಈ ಶಾಲಾ ಶಿಕ್ಷಕರು ನಮ್ಮೊಂದಿಗೆ ಸಹಕರಿಸಿದ್ದಾರೆ ಎಂದು ಎಲ್ಲರಿಗೂ ಧನ್ಯವಾದ ಹೇಳಿದರು ಹಾರ್ನಳ್ಳಿ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಮೊದಲೆ ನಾಯಕ್ ಅವರ ಪುತ್ರ ಹಾಗೂ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನ ಮದಕರಿ ನಾಯಕ್ ಮಾತನಾಡಿ ಶಿಬಿರ ಯಶಸ್ವಿಯಾಗಿದೆ ದೊರೆತಿರುವ ಸೌಲಭ್ಯವನ್ನು ಬಳಸಿಕೊಂಡು ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಬಹಳ ಉತ್ಸಾಹದಿಂದ ಶಾಲಾ ಶಿಕ್ಷಕರು ಹಾಗೂ ನಮ್ಮ ಕಾಲೇಜಿನ ಮಾರ್ಗದರ್ಶನದಲ್ಲಿಯೇ ಉತ್ತಮ ಚಿತ್ರಗಳನ್ನು ಬಿಡಿಸಿ ಶಾಲೆಯ ಮಕ್ಕಳಿಗೆ ಸಹಕಾರಿ ಆಗಿದ್ದಾರೆ ಎಂದರು ಶಾಲಾ ಮುಖ್ಯಶಿಕ್ಷಕ ಸೋಮಶೇಖರ್ ಮಕ್ಕಳು ನಮ್ಮ ಶಾಲೆಯ ಬಗ್ಗೆ ತೋರಿರುವ ಅಪಾರ ಅಭಿಮಾನ ಅವರು ಹಾಗೂ ಅವರ ತ್ಯಾಗವನ್ನು ನಾವು ಮರೆಯುವಂತಿಲ್ಲ ಯಾವುದಾದರೂ ಇದ್ದಲ್ಲಿ ಅವುಗಳನ್ನು ದಯಮಾಡಿ ಮರೆಯಬೇಕೆಂದು ಅವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿ ಎರಡು ಕಾಲೇಜಿನ ಆಡಳಿತ ಮಂಡಳಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು